ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 820/2022

.................................................................

CW 02
PW 01

| | | |
|---|---|---|
| ಹೆಸರು | : | ಜಾನ್ ಡಾಲ್ಮೇತ್ |
| ತಂದೆಯ ಹೆಸರು | : | ಬಸ್ತ್ಯಾಂವ್ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸಸ್ಥಳ | : | ಮಂಗಳವಾಡ. |

ದಿನಾಂಕ 16-12-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಈಗ ನ್ಯಾಯಾಲಯದ ಮುಂದಿರು ಆರೋಪಿಯನ್ನು ನೋಡಿದ್ದೇನೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದಾಳಿ ಕಾಲದ ಪಂಚನಾಮೆ ಇದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ನಾನು ಹಳಿಯಾಳಕ್ಕೆ ಬಂದಾಗ ಠಾಣೆಯ ಹತ್ತಿರ ಇದ್ದಾಗ ಪೊಲೀಸರು ನಿಪಿ 1 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ದಾಳಿ ಪಂಚನಾಮೆ ಮಾಡಿಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಮು.ಮಾ. ಗಳನ್ನು ಜಪ್ತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು :** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ದಿನಾಂಕ 09-05-2022 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ 3 ರವರನ್ನು ಬರಮಾಡಿಕೊಂಡು ಕಳಸಾಪುರ ಗ್ರಾಮದ ಅಂಗನವಾಡಿ ಸಮೀಪ ಸಾರ್ವಜನಿಕ ಜಾಗಕ್ಕೆ ಈ ಪ್ರಕರಣಕ್ಕೆ ಸಂಬಂಧಿಸಿ ಕರೆದುಕೊಂಡು ಹೋಗಿ ಜಾಗದಲ್ಲಿ ಆರೋಪಿಯ ವಶದಿಂದ 90 ಎಮ್ ಎನ್ ನ ಓರಿಜಿನಲ್ ಚಾಯ್ಸು ಎಂಬ ಲೇಬಲ್ ಇರುವ 4 ಸ್ಯಾಚೇಟಗಳು, 90 ಎಮ್ ಎಲ್ ನ ಮಾಕ್ವಿನ್ವಟೋಸ್ ವಿಸ್ಕಿ ಎಂಬ ಲೇಬಲ ಇರುವ 5 ಸ್ಯಾಚೇಟಗಳನ್ನು, 2 ಪ್ಲಾಸ್ಟೀಕ್ ಗ್ಲಾಸ, ಒಂದು ನೀರಿನ ಖಾಲಿ ಬಾಟಲ್, ಓರಿಜಿನಲ್ ಚಾಯ್ಸು ಎಂಬ ಲೇಬಲ ಇರುವ 4 ಖಾಲಿ ಸ್ಯಾಚೇಟ್ಗಳು ಹಾಗೂ ಒಂದು ರಟ್ಟಿನ ಬಾಕ್ಸ್ ಅನ್ನು ಜಪ್ತುಪಡಿಸಿಕೊಂಡು ಆ ಪೈಕಿ ಮೇಲೆ ಮದ್ಯದ ಸ್ಯಾಚೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿ ಬಿಳಿ ಬಟ್ಟೆಯಲ್ಲಿ ಹಾಕಿ ಹೊಲೆದು ಅರಗಿನ ಸೀಲ್ ಹಾಕಿ ಹಾಗೂ ಉಳಿದ ಮು.ಮಾ.ಗಳನ್ನು ಹಾಗೂ ಆರೋಪಿಯನ್ನು ಪೊಲೀಸರು ತಮ್ಮ ವಶಕ್ಕೆ ಪಡದು ನಿಪಿ 1 ರಂತೆ ದಾಳಿ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ಆರೋಪಿ ಪರಿಚಯ ಇರುವುರಿಂದ ನಿಪಿ 1 ರಂತೆ ನನ್ನ ಸಮಕ್ಷಮ ದಾಳಿ ಪಂಚನಾಮೆ ಜರುಗಿಸಿ ನ್ಯಾಯಾಲಯದ ಮುಂದಿರುವ ಮು.ಮಾಗಳನ್ನು ಜಪ್ತುಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀಮತಿ ಆರ್ ಎಮ್ ಸಿ ವಕೀಲರು ಏನೂ ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಆದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.